# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಂಖ್ಯೆ: ವಾರ್ಡ್ ಸಂಖ್ಯೆ 10/ಸಭೆ/ಪಿಆರ್/21/2020-21 ದಿನಾಂಕ: 21/08/2021.**

ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ. 10 ದೊಡ್ಡಬೊಮ್ಮಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: 21/08/2021 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಅಧಿಕಾರಿ/ಸದಸ್ಯರು

1. ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ಹಾಗೂ ಸ.ಕಾ.ಅ, ಕೊಡಿಗೇಹಳ್ಳಿ ಉಪವಿಭಾಗ
2. ಶ್ರೀಮತಿ. ಶ್ವೇತಾ ಎನ್.ಆರ್, ಸಹಾಯಕ ಅಭಿಯಂತರರು
3. ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ
4. ಶ್ರೀ ಪ್ರವೀಣ್, ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಮಂಜುನಾಥ್, ಕಿರಿಯ ಆರೋಗ್ಯ ಪರಿವೀಕ್ಷಕರು
6. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿರವರು.
7. ಕಲ್ಯಾಣಾಧಿಕಾರಿಗಳು, ಬಿಬಿಎಂಪಿ
8. ಶ್ರೀ ಪ್ರಕಾಶ್ ಕೆ, ಸದಸ್ಯರು
9. ಶ್ರೀ ಶ್ರೀನಿವಾಸ್, ಸದಸ್ಯರು
10. ಶ್ರೀ ಆರ್.ಎಂ. ಶ್ರೀನಿವಾಸ್, ಸದಸ್ಯರು
11. ಶ್ರೀ. ಪಿಳ್ಳಪ್ಪ, ಸದಸ್ಯರು
12. ಶ್ರೀಮತಿ. ಬೇಬಿ ರಾಣಿ, ಸದಸ್ಯರು
13. ಶ್ರೀ. ದಯಾಳ್, ಸದಸ್ಯರು

ಶ್ರೀ ಜಿ. ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ:- ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ:-

- ಪ್ರಸ್ತುತ ಕೋವಿಡ್-19 ರ 3ನೇ ಅಲೆಯಲ್ಲಿ ಹಿಂದಿನಂತೆ ರೋಗಲಕ್ಷಣಗಳು ಕಂಡುಬರುವುದಿಲ್ಲ, ನೇರವಾಗಿ ಶ್ವಾಸಕೋಶಕ್ಕೆ ಹಾನಿ ಮಾಡುವುದರಿಂದ ಸಾರ್ವಜನಿಕರು ಬಹಳ ಎಚ್ಚರದಿಂದ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುತ್ತ, ಮೊದಲಿನಂತೆಯೇ ಮಾಸ್ಕ್ ಹಾಗೂ ಸ್ಯಾನಿಟೈಜರ್ ಉಪಯೋಗಿಸುತ್ತಿರುವಂತೆ ಸಾರ್ವಜನಿಕರಿಗೆ ಸೂಚಿಸಿದರು.

**ಸದಸ್ಯರುಗಳು ಹಾಗೂ ಸಾರ್ವಜನಿಕರು:-**

- ನಾಗಲ್ಯಾಂಡ್ ಸರ್ಕಲ್ ಹತ್ತಿರ ಪ್ರತಿನಿತ್ಯ ಘನತ್ಯಾಜ್ಯ ತೆರವುಗೊಳಿಸುವಂತೆ ಸಭೆಯಲ್ಲಿದ್ದ ಸಾರ್ವಜನಿಕರು ಕೋರಿದ್ದು, ಅದರಂತೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ

ಪರಿವೀಕ್ಷಕರು ಪ್ರತಿನಿತ್ಯ ಶುಚಿಗೊಳಿಸಲಾಗುತ್ತಿರುತ್ತದೆ. ಆದರೂ, ಬ್ಲಾಕ್ ಸ್ಪಾಟ್ ಉಂಟಾಗಿದ್ದು, ಕೂಡಲೇ ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

- ನಂಜಪ್ಪ ಸರ್ಕಲ್ ಬಳಿ ಬಿ.ಇ.ಎಲ್. ಕಡೆ ಹೋಗುವ ರಸ್ತೆಯಲ್ಲಿ ಅನವಶ್ಯಕವಾಗಿರುವ ರಸ್ತೆ ಉಬ್ಬು ತೆರವುಗೊಳಿಸುವಂತೆ ಕೋರಿರುತ್ತಾರೆ.

  ನೋಡಲ್ ಅಧಿಕಾರಿಗಳು, ಈ ಬಗ್ಗೆ ಪಾಲಿಕೆಯ TEC ವಿಭಾಗಕ್ಕೆ ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸುವುದಾಗಿ ತಿಳಿಸಿರುತ್ತಾರೆ.

- ದೊಡ್ಡಬೊಮ್ಮಸಂದ್ರ ಕೆರೆಗೆ ರಾಜಕಾಲುವೆಯಿಂದ ಬರುವ ನೀರು ಮುಂದೆ ಹರಿಯದೇ ನಿಂತಿರುವುದರಿಂದ ಸುತ್ತಮುತ್ತಲ ಪ್ರದೇಶದಲ್ಲಿ ಕೆಟ್ಟ ವಾಸನೆ ಬರುತ್ತಿರುವುದಾಗಿ ಸಾರ್ವಜನಿಕರು ದೂರಿರುತ್ತಾರೆ.

  ನೋಡಲ್ ಅಧಿಕಾರಿಗಳು, ಸದರಿ ರಾಜಕಾಲುವೆಯನ್ನು ಶುಚಿಗೊಳಿಸಲು ಸಂಬಂಧಪಟ್ಟ ವಿಭಾಗಕ್ಕೆ ತಿಳಿಸಿ, ಮುಂದಿನ ಸಭೆಗೆ ಅಧಿಕಾರಿಗಳನ್ನು ಆಹ್ವಾನಿಸುವುದಾಗಿ ತಿಳಿಸಿರುತ್ತಾರೆ.

- ಸಾರ್ವಜನಿಕರು 2021-22ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಮಾಹಿತಿ ನೀಡುವಂತೆ ಕೋರಿರುತ್ತಾರೆ.

  ಕಲ್ಯಾಣಧಿಕಾರಿಗಳು, ಮುಂದಿನ ಸಭೆಯಲ್ಲಿ 2021-22ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಸಂಪೂರ್ಣ ವಿವರಗಳನ್ನು ಸಭೆಗೆ ನೀಡುವುದಾಗಿ ತಿಳಿಸಿರುತ್ತಾರೆ.

ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ನೋಡೆಲ್ ಅಧಿಕಾರಿ ವಾರ್ಡ್-10 ಹಾಗೂ ಸಹಾಯಕ
ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
8. ಕಛೇರಿ ಕಡತಕ್ಕೆ.